ಸರ್ವಿಸ್ ಕೂಡ ಇಲ್ಲ. ಇದು ಒಂದೇ ರಸ್ತೆಯಾಗಿದ್ದು, ಅನಾಹುತಗಳು ಆಗುವಂಥಾದ್ದನ್ನು ಗಮನದಲ್ಲಿಟ್ಟು ಕೊಂಡು, ಇದನ್ನು ಎಷ್ಟು ತೀವ್ರವಾಗಿ, ಎಷ್ಟು ನಿರ್ದಿಷ್ಟ ಕಾಲಾವಧಿಯಲ್ಲಿ ತಾವು ಮಾಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಕೇಂದ್ರ ಭೂ ಸಾರಿಗೆ ಸಚಿವರೊಡನೆ ಹಿಂದಿನ ಸರ್ಕಾರವೂ ಈ ಒಂದು ರಸ್ತೆಯನ್ನು ಆದ್ಯತೆಯ ಮೇಲೆ ತೆಗೆದುಕ್ಕೊಳ್ಳಬೇಕೆಂದು ಗಮನವನ್ನು ಸೆಳೆದಿದ್ದರು. ಮತ್ತೆ ಹಲವಾರು ಬಾರಿ ಚರ್ಚೆ ಆಗಿದೆ. ಈ ಹೊಸ ಸರ್ಕಾರ ಬಂದ ನಂತರವೂ, ನಾನು ಕೇಂದ್ರ ಭೂ ಸಾರಿಗೆ ಸಚಿವರನ್ನು ಭೇಟಿ ಮಾಡಿ, ಈ ರಸ್ತೆಯ ವಾಹನಗಳ ಒತ್ತಡದ ಬಗ್ಗೆ ವಿವರವಾಗಿ ಚರ್ಚೆಯನ್ನು ಮಾಡಿ, ಇವತ್ತು ಇದನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಈ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು–ಹಾಸನ ಆಯಿತು, ಕೋಲಾರದ್ದು ಮಿನಿಸ್ಟರ್‌ರವರು ಘೋಷಣೆ ಮಾಡಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವರ್ಷವೇ ಈ ಒಂದು ಕೆಲಸಕ್ಕೂ ಚಾಲನೆ ಕೊಡಲು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಉತ್ತರ ಕರ್ನಾಟಕದಲ್ಲಿ ಇದು ಏಕೈಕ ರಸ್ತೆಯಾಗಿದೆ. ತಾವು ಬೆಂಗಳೂರು–ಹಾಸನ, ಕೋಲಾರ–ಬೆಂಗಳೂರು, ಹಿಡಿದುಕೊಂಡು ಹೋಗುವುದಕ್ಕಿಂತ, ಆ ಕಡೆಗೂ ತಾವು ಲಕ್ಷ್ಯವನ್ನು ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಆದಷ್ಟು ಬೇಗ ಎಂದು ನಾನು ಹೇಳುತ್ತಿದ್ದೇನೆ. ಈ ವರ್ಷವೇ ಇದರ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂಥಾದ್ದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ವಿಷಯ: ಚಿಂಚೋಳಿ ತಾಲ್ಲೂಕಿನಲ್ಲಿ ಮಕ್ಕಳ ಮಾರಾಟ ನಡೆಸುತ್ತಿರುವ ಬಗ್ಗೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ಚಿಂಚೋಳಿ ತಾಲ್ಲೂಕಿನಲ್ಲಿ ಕಳೆದ 4–5 ವರ್ಷಗಳ ಹಿಂದೆ ಮಕ್ಕಳ ಮಾರಾಟ ಆಗಿರುವ ವಿಚಾರ ಇಡೀ ನ್ಯಾಷನಲ್ ಪ್ರೆಸ್‌ನಲ್ಲಿ ಬಂತು, ಎಲ್ಲಾ ಕಡೆಗಳಲ್ಲೂ ಬಂತು. ಆದರೆ ಇತ್ತೀಚೆಗೂ ಇಂತಹ ಘಟನೆಗಳು ಆಗುತ್ತಿವೆಯೆಂದು ಕೆಲವು ಪತ್ರಿಕೆಗಳಲ್ಲೂ, ಟಿ.ವಿ. ಯಲ್ಲೂ ಹೇಳಿದರು. ಆಂಧ್ರಪ್ರದೇಶಕ್ಕೆ ಕರೆದುಕೊಂಡು ಹೋಗಿ ಮಾರಾಟ ಮಾಡುತ್ತಾರಂತೆ. ಹಿಂದೆ ಕೂಡ ನೂರಾರು ಮಕ್ಕಳನ್ನು ಮಾರಾಟ ಮಾಡಲ್ಪಟ್ಟಿತ್ತು. ಅದರ ಬಗ್ಗೆಯೂ ಕೂಡ ಇವತ್ತಿನವರೆಗೂ ಯಾವುದೇ ರಿಪೋರ್ಟ್ ಇಲ್ಲ. ಆ ಮಕ್ಕಳನ್ನು ಎಲ್ಲಿ ಮಾರಿದರು, ಎಲ್ಲಿ ಇದ್ದಾರೆ? ಈ ದೇಶದಲ್ಲಿ ಇದ್ದಾರ? ಅಥವಾ ಪರದೇಶದಲ್ಲಿ ಇದ್ದಾರ? ಅವರ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಒಂದು ವರ್ಷದ ಹಿಂದೆ ಕೇಳಿದಾಗ ಎನ್‌ಕ್ವಾಯರಿ ನಡೆಯುತ್ತಿದೆಂದು ಉತ್ತರ ಬಂತು. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಮಾಡಬೇಕೆಂದು ತಕ್ಷಣವೆ ಸ್ಪಂದಿಸಿ ಈಗಾಗಲೆ ಸೂಚನೆ ಕೊಟ್ಟಿದ್ದಾರೆ. ನಾನು ಸಾಧ್ಯವಾದರೆ ಅಲ್ಲಿ ಹೋಗಿ ಬರುವುದಲ್ಲದೆ ಅಂತಹ ಕುಟುಂಬದ ಸಮಸ್ಯೆಗಳನ್ನು ನೋಡಿ ತೀರ್ಮಾನ ಮಾಡಿದ್ದೇನೆ. ಅದೇನೆಂದರೆ ಇಂತಹ ಒಂದು ಪ್ರಕರಣಕ್ಕೆ ಈಗಾಗಲೇ ಮುಖ್ಯಮಂತ್ರಿಗಳ ಪರಿಹಾರ ನಿಧಿ ಏನಿದೆ ಅದರ ಪ್ರಕಾರ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ನೆರವನ್ನು ಕೊಟ್ಟುಕೊಂಡು ಬಂದಿದ್ದಾರೆ, ಆ ನೆರವನ್ನು ತಕ್ಷಣವೆ ಕೊಡುವಂತಹ ಕೆಲಸವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಈ ವಿಷಯದಲ್ಲಿ ಮಾನ್ಯ ಸದಸ್ಯರುಗಳು ಏನು ಗಮನವನ್ನು ಸೆಳೆದಿದ್ದೀರಿ, ಸರ್ಕಾರದಿಂದ ಇದಕ್ಕೆ ಕಾನೂನು ತರುವುದಕ್ಕೆ ಏನೂ ತೊಂದರೆಯಾಗುವುದಿಲ್ಲ ತರೋಣ. ಆ್ಯಸಿಡ್ ಏನು ಮಾರುತ್ತಾರೆ ಅದನ್ನು ಮೆಡಿಕಲ್ ಸ್ಟೋರ್‌ನಲ್ಲಿ ಮಾತ್ರ ಮಾರುವಂತೆ ಕಾನೂನಿನಲ್ಲಿ ತಿದ್ದುಪಡಿ ತರಬೇಕೆಂದು ಹೇಳಿದಿರಿ. ಮನೆ ಹಾಗೂ ಕಟ್ಟಡಗಳ ಕೆಲಸ ಮಾಡುವಂತಹ ಸಂದರ್ಭದಲ್ಲಿ ಆ್ಯಸಿಡ್ ಯೂಜ್ ಮಾಡುವಂತಹದ್ದು ಇದ್ದು, ಆ ಆ್ಯಸಿಡ್ ಯಾರು ತೆಗೆದುಕೊಂಡು ಹೋಗುತ್ತಾರೆಂದು ದಾಖಲಿಸಲು ಅಂಗಡಿಯವರಿಗೆ ಅಥಾರೈಸ್ ಮಾಡಿ ಕೊಟ್ಟರೆ ಅದರಿಂದ ಉಪಯೋಗವಾಗುವುದಿಲ್ಲ ಮತ್ತು ಅದರ ವಿವರಗಳು ಕೂಡ ಸಿಗುವುದಿಲ್ಲ. ಆದುದರಿಂದ ನಾವು ಹೆಣ್ಣು ಮಕ್ಕಳ ಮೇಲೆ ದಬ್ಬಾಳಿಕೆ ಮಾಡುವಂತಾದ್ದು ಏನಿದೆ ಅದಕ್ಕೆ ನಾವು ಸ್ವಪ್ರೇರಣೆಯಿಂದ ಅಂತಹ ಕೆಲಸಗಳನ್ನು ಮಾಡಬಾರದು ಎನ್ನುವ ಭಾವನೆ ಎಲ್ಲರಲ್ಲೂ ಬರಬೇಕು. ನಾವು ಕಾನೂನಿನ ಪ್ರಕಾರ ಏನು ಶಿಕ್ಷೆಯನ್ನು ಕೊಡಬೇಕೊ, ಅದನ್ನು ಕೊಡುವಂಥಾದ್ದಕ್ಕೆ ಇನ್ನು ಹೆಚ್ಚಿನ ಕಾನೂನನ್ನು ತರಬೇಕೆಂದರೆ ತರೋಣವೆಂದು ಹೇಳಬಯಸುತ್ತೇನೆ.

(ಊ) ವಿಷಯ: ಸೊಲ್ಲಾಪುರದಿಂದ ಚಿತ್ರದುರ್ಗದವರೆಗಿನ ರಾಷ್ಟ್ರೀಯ ಹೆದ್ದಾರಿ 13ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಬಿಜಾಪುರದಿಂದ ಚಿತ್ರದುರ್ಗದವರೆಗೆ ಇರುವಂತಹ ನ್ಯಾಷನಲ್ ಹೈವೇಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡಲು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ನಾನು ಇಚ್ಛಿಸುತ್ತೇನೆ.

ಸೊಲ್ಲಾಪುರದಿಂದ ಚಿತ್ರದುರ್ಗದವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–13 ಎಂದು 1960ರಲ್ಲಿ ಹಾಗೂ ಚಿತ್ರದುರ್ಗದಿಂದ ಮಂಗಳೂರು ವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–13 ಮುಂದುವರೆದ ಭಾಗ ಎಂದು 1999 ರಲ್ಲಿ ಘೋಷಿಸಲಾಗಿದೆ. ಈ ಹೆದ್ದಾರಿಯ ಒಟ್ಟು ಉದ್ದ 715 ಕಿಮೀ ಇರುತ್ತದೆ.

ಸೊಲ್ಲಾಪುರದಿಂದ ಹೊಸಪೇಟೆಯವರೆಗೆ ಒಟ್ಟು 194 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ–13 ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಕಾಮಗಾರಿಗೆ ಕರಡು ಯೋಜನಾ ವರದಿಯನ್ನು ತಯಾರಿಸುವ ಕೆಲಸವನ್ನು ಸಮಾಲೋಚಕರಿಗೆ (Consultants) ವಹಿಸಲಾಗಿದೆ. ಹಾಗೂ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ರಾಷ್ಟ್ರೀಯ

ಹೆದ್ದಾರಿ ಅಭಿವೃದ್ಧಿ ಯೋಜನೆಯ ಮೂರನೇ ಹಂತದಲ್ಲಿ (NHDP Phase III) ಕೈಗೊಳ್ಳಲಾಗುವುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತಿಳಿಸಿರುತ್ತದೆ.

ಹೊಸಪೇಟೆಯಿಂದ ಚಿತ್ರದುರ್ಗದವರೆಗಿನ ಸುಮಾರು 130 ಕಿಮೀ ಉದ್ದದ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಕಾಮಗಾರಿಗೆ ಕರಡು ಯೋಜನೆ ವರದಿ ತಯಾರಿಸುವ ಕೆಲಸಕ್ಕೆ ಸಮಾಲೋಚಕರನ್ನು (Consultants) ನಿಯೋಜಿಸುವ ಕೆಲಸವು ಪ್ರಗತಿಯಲ್ಲಿರುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಿಳಿಸಿರುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಮೇಲಿಂದ ಮೇಲೆ ವಿಧಾನಸಭೆಯಲ್ಲಿ ಬರುತ್ತಲೇ ಇದೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳ ಬಯಸುವುದೇನೆಂದರೆ, "ನ್ಯಾಷನಲ್ ಹೈವೇ ಅಥಾರಿಟಿ" ಯವರಲ್ಲಿ ಒಂದು ಸ್ಟ್ಯಾಟಿಸ್ಟಿಕ್ಸ್ ಇದೆ. ಆ ರಸ್ತೆಯಲ್ಲಿ ಪ್ರತಿನಿತ್ಯ ಎಷ್ಟು ಆಕ್ಸಿಡೆಂಟ್ಸ್ ಆಗುತ್ತದೆಂಬ ಬಗ್ಗೆ ಮಾಹಿತಿ ಇರುತ್ತದೆ. ಮೊನ್ನೆ ದಿವಸ ಕೂಡ್ಲಿಗಿಯಲ್ಲಿ ಒಂದು ಆಕ್ಸಿಡೆಂಟ್ ಆಗಿರುವ ಫೋಟೊವನ್ನು ತಮಗೆ ಕಳುಹಿಸಿದ್ದೇನೆ. ಒಂದೇ ಕುಟುಂಬದ ಒಂಭತ್ತು ಜನರು ಸತ್ತಿದ್ದಾರೆ. ಇದು ನಡೆದು ಇನ್ನು ಆರು ದಿವಸಗಳು ಆಗಿವೆ. ಆ ಫೋಟೊಗಳನ್ನು ತಮಗೆ ಕಳಹಿಸಿಕೊಟ್ಟಿದ್ದೇನೆ. ಈ ಆಕ್ಸಿಡೆಂಟ್ ರೇಟ್ಸ್ ಕಡಿಮೆ ಆಗಿಲ್ಲ. ಮತ್ತೆ ಈ ನ್ಯಾಷನಲ್ ಹೈವೇನಲ್ಲಿ traffic intensity, per day 40,000 vehicles ಇದೆ. ಈ ರಸ್ತೆ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬರುವಂತಹ ಮೇಜರ್ ನ್ಯಾಷನಲ್ ಹೈವೆ ಆಗಿದೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದೆಂದರೆ, ಇದು ಬಿ.ಓ.ಟಿ. ಬೇಸಿಸ್ ಮೇಲೆ ಆಗಲಿ, ಅಥವಾ ಗೌವರ್ನಮೆಂಟ್‌ನಿಂದಾಲಾದರೂ ಆಗಲಿ, ನಮಗೆ ಏನು ಅಭ್ಯಂತರವಿಲ್ಲ. ಆದರೆ ಇದನ್ನು ಆದಷ್ಟು ತೀವ್ರವಾಗಿ ಮಾಡಬೇಕು. ಇದರ ಬಗ್ಗೆ ಶ್ರೀ ವಿಜಯ ಮಲ್ಯರವರ ಪ್ರಶ್ನೆಗೆ ಕೇಂದ್ರ ಸರ್ಕಾರದಿಂದ ಒಂದು ಉತ್ತರ ಬಂದಿದೆ. ಇದು ಕನ್ಸಿಡರೇಷನ್‌ನಲ್ಲಿ ಇಲ್ಲವೆನ್ನುವಂಥ ಮಾತನ್ನು ಅಲ್ಲಿ ಹೇಳಿದ್ದಾರೆ. ಇಲ್ಲಿ "ನಾವು ಕನ್ಸಲ್ಟೇಷನ್ ಕೊಟ್ಟಿದ್ದೇವೆ, ಈಗ ನಾವು ಸರ್ವೆ ಮಾಡುತ್ತಿದ್ದೇವೆ" ಎಂಬ ಉತ್ತರವನ್ನು ಕೊಟ್ಟಿದ್ದೀರಿ. ಇದರಲ್ಲಿ ಯಾವುದು ನಿಜವೆಂದು ಗೊತ್ತಿಲ್ಲ. ತಾವು ಸಹ ಕೇಂದ್ರ ಸರ್ಕಾರಕ್ಕೆ ಹೋಗುತ್ತಿರುತ್ತೀರಿ. ಅಲ್ಲಿ ಭೂ ಸಾರಿಗೆ ಸಚಿವರು ಕರ್ನಾಟಕ ರಾಜ್ಯದವರೇ ರಾಜ್ಯ ಸಚಿವರು ಇದ್ದಾರೆ. ಅವರಿಗೂ ನಾನು ವಿನಂತಿ ಮಾಡಿಕೊಂಡಿದ್ದೇನೆ. ಇದನ್ನು ಆದಷ್ಟು ತೀವ್ರವಾಗಿ ಮಾಡಬೇಕು. ಮಾನ್ಯ ಧರ್ಮಸಿಂಗ್‌ರವರು ಇದ್ದಾಗಲೂ ಇದನ್ನು ಮಾಡುತ್ತೇವೆಂದು ಘೋಷಣೆಯನ್ನು ಮಾಡಿದ್ದರು. ಅವರು ಮಾಡುವಂತಹ ಪ್ರಯತ್ನವನ್ನು ಮಾಡಿದ್ದರು. ಆದುದರಿಂದ ತಮ್ಮ ಮುಖಾಂತರವಾಗಿ ಇದನ್ನು ಆದಷ್ಟು ತೀವ್ರವಾಗಿ ಮಾಡಬೇಕೆಂದು ವಿನಂತಿಸುತ್ತೇನೆ. ಇದು ಉತ್ತರ ಕರ್ನಾಟಕದಿಂದ ಬರುವಂತಹ ರಸ್ತೆಯಾಗಿದ್ದು ದಕ್ಷಿಣ ಕರ್ನಾಟಕಕ್ಕೆ ಬಹಳ ಪ್ರಾಮುಖ್ಯವಾಗಿರುವಂತಹ ರಸ್ತೆಯಾಗಿದೆ. ಇದು ಬ್ರಾಡ್ ಗೇಜ್ ಇಲ್ಲ, ಮತ್ತೆ

ಕೊಡಬೇಕು. ಮೆಡಿಕಲ್ ಸ್ಟೋರ್ ಎಲ್ಲಾ ಕಡೆ ಇದೆ, ಅದೂ ಅಲ್ಲದೆ ಅವರು ಪರ್ಪಸ್ ಕೂಡ ಯಾವುದಕ್ಕೆ ಕೊಡುತ್ತೇವೆ ಎಂದು ರಿಜಿಸ್ಟರ್ ಮಾಡಿಕೊಂಡು ಇಟ್ಟುಕೊಳ್ಳುತ್ತಾರೆ. ಮತ್ತು ಇದನ್ನು ಯಾರು ಪಿಸ್ಕೈಬ್ ಮಾಡಿದ್ದಾರೆ. ಯಾವ ವ್ಯಕ್ತಿ ತೆಗೆದುಕೊಂಡು ಹೋಗುತ್ತಾನೆ ಎನ್ನುವುದು ಕೂಡ ದಾಖಲೆ ಮಾಡಬಹುದು. ಅದು ಒಂದು ಸಲಹೆ. ಮತ್ತು ಕನ್‌ವಿಕ್ಷನ್ ಬಗ್ಗೆ ಹೇಳುವುದಾದರೆ ಒಬ್ಬರಿಗೂ ಕೂಡ ಕನ್‌ವಿಕ್ಷನ್ ಆಗಿಲ್ಲ. ಕನ್‌ವಿಕ್ಷನ್ ಮಾಡತಕ್ಕಂಥ ಕಾಯಿದೆಯನ್ನು ತಾವು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ತಮಗೆ ಇದರ ಬಗ್ಗೆ ಅನುಭವ ಇದೆ. ತಾವು ನೊಂದವರಿದ್ದೀರಿ. ತಮಗೆ ನಾವು ಹೆಚ್ಚಿಗೆ ಹೇಳಬೇಕಾಗಿಲ್ಲ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ತಾವೇನು ಸೆಕ್ಷನ್ 320, 326, 307 ಎಂದು ಏನು ಕೆಲವು ವಿಚಾರಗಳನ್ನು ಹೇಳಿದಿರಿ, ಆದರೆ ಇವತ್ತು ಯಾವುದೇ ಕಾನೂನು ಬಂದರೂ ಏನೇ ಗಲಾಟೆಯಾದರೂ ರಕ್ಷಣೆ ಪಡೆಯುವಂತಹ ಸಲ್ಯೂಷನ್ ಕಂಡು ಹಿಡಿದುಕೊಂಡು ಬಿಡುತ್ತಾರೆ. ಆದರೆ ಇದಕ್ಕೆ ಶಿಕ್ಷೆ ಹೇಗಿರಬೇಕೆಂದರೆ ಒಂದು ಸಲ ಶಿಕ್ಷೆಯನ್ನು ಕೊಟ್ಟರೆ ಆ ಆ್ಯಸಿಡ್ ಅನ್ನು ಎರಚುತ್ತೇವೆ ಎಂದು ಮನಸ್ಸಿನಲ್ಲೂ ಕೂಡ ಭಾವಿಸಬಾರದು. ಆ ರೀತಿ ಶಿಕ್ಷೆ ಕೊಡುವುದಕ್ಕೆ ಕಾನೂನಿನಲ್ಲಿ ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದೆಯಾ ಎಂದು ಸರ್ಕಾರಿ ಪರಿಶೀಲನೆ ಮಾಡಬೇಕು.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಬಹಳ ಸ್ಟ್ರಿಕ್ಟ್ ಆಗಿ ಆ್ಯಸಿಡ್ ಇರಬಾರದೆಂದು ಹೇಳಿದರೆ ಗೋಲ್ಡ್‌ಸ್ಮಿತ್‌ನವರೆಲ್ಲಾ ಇಲ್ಲಿ ಧರಣಿಗೆ ಬರುತ್ತಾರೆ. ಏಕೆಂದರೆ ನಮಗೆ ಆ್ಯಸಿಡ್ ಸಿಗಲಿಲ್ಲವೆಂದು. ಆದುದರಿಂದ ಅದರ ಬಗ್ಗೆ ಯೋಚನೆಯನ್ನು ಮಾಡಿ ತಾವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವಂತಹ ಆ್ಯಸಿಡ್ ದಾಳಿಗಳ ಬಗ್ಗೆ ಸದನದಲ್ಲಿ ಮಾನ್ಯ ಸದಸ್ಯರುಗಳು ಏನು ಗಮನವನ್ನು ಸೆಳೆದಿದ್ದಾರೆ. ಅದಕ್ಕೆ ಕಾನೂನು ಪ್ರಕಾರ ಆರೋಪಿಗಳಿಗೆ ಶಿಕ್ಷೆಯನ್ನು ಕೊಡುವುದಕ್ಕೆ ಸರ್ಕಾರ ಕಾನೂನು ಮಾಡಿದ್ದರೂ ಕೂಡ, ಎಷ್ಟೋ ಆರೋಪಿಗಳು ಆ ಒಂದು ಕಾನೂನಿನ ಚೌಕಟ್ಟಿನಲ್ಲಿ ಕೂಡ ತಪ್ಪಿಸಿಕೊಳ್ಳುವಂತಹ ಘಟನೆಗಳು ಏನಿವೆ, ಅದಕ್ಕೆ ಇನ್ನು ಹೆಚ್ಚಿನ ರೀತಿಯಲ್ಲಿ ಪರಿಣಾಮ ಕಾರಿಯಾಗಿ ಕಾನೂನು ತರುವುದಕ್ಕೆ ಸಾಧ್ಯವಾದರೆ ಮಾಡೋಣ. ಆದರೆ ಸರ್ಕಾರ ಕಾನೂನು ತರುವುದಕ್ಕಿಂತ ಹೆಚ್ಚಾಗಿ, ಪ್ರತಿಯೊಬ್ಬ ಮನುಷ್ಯನಲ್ಲಿ ಆ ಒಂದು ಮಾನವೀಯ ಮೌಲ್ಯಗಳು ಉಳಿಯದೆ ಇದ್ದರೆ ಇಂತಹ ಘಟನೆಗಳು ಆಗುವುದಕ್ಕೆ ಪ್ರೇರೆಪಣೆಯಾಗುತ್ತಿದೆ, ಈ ವಿಚಾರಗಳಲ್ಲಿ ಸರ್ಕಾರ ಇನ್ನು ಕಠಿಣವಾದಂತಹ ಕಾನೂನು ತರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಅದರ ಜೊತೆಗೆ ಮಾನ್ಯ ರೋಷನ್ ಬೇಗ್‌ರವರು ಅವರ ಕ್ಷೇತ್ರದಲ್ಲಿ ಆದಂತಹ ಘಟನೆ ಬಗ್ಗೆ ಹೇಳಿದಿರಿ. ಈಗಾಗಲೇ ಆರೋಗ್ಯ ಸಚಿವರು ಆಸ್ಪತ್ರೆಯ ಅಧಿಕಾರಿಗಳಿಗೆ ಎಲ್ಲಾ ರೀತಿಯ ಅನುಕೂಲವನ್ನು ಚಿಕಿತ್ಸೆಯನ್ನು ಕೊಡುವಂತಹ ವಿಚಾರದಲ್ಲಿ ಆ ಹೆಣ್ಣುಮಗಳಿಗೆ

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಮಕ್ಕಳ ಮಾರಾಟದ ಬಗ್ಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ ಪ್ರಕರಣವು ದಾಖಲಾಗಿರುವುದಿಲ್ಲ. ಪತ್ರಿಕೆಗಳಲ್ಲಿ ಮಕ್ಕಳ ಮಾರಾಟದ ಬಗ್ಗೆ ಬಂದ ವರದಿಯನ್ನು ಗಮನಿಸಿದ ಗುಲ್ಬರ್ಗಾ ಜಿಲ್ಲೆಯ ಅರಕ್ಷಕ ಅಧೀಕ್ಷಕರು (ಎಸ್.ಪಿ) ಖುದ್ದಾಗಿ ತನಿಖೆ ಮಾಡಲಾಗಿ, ವರದಿಯ ಸುಳ್ಳೆಂಬುದು ತಿಳಿದು ಬಂದಿರುತ್ತದೆ. ಆದರೆ, 2001ನೇ ವರ್ಷದಲ್ಲಿ ಮಕ್ಕಳ ಮಾರಾಟದ ಎರಡು ಪ್ರಕರಣಗಳು ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂ:16/2001 ಮತ್ತು 17/2001ರಲ್ಲಿ ದಾಖಲಾಗಿರುತ್ತದೆ. ಈ ಪ್ರಕರಣಗಳನ್ನು ತನಿಖೆ ಮಾಡಲಾಗಿ, ಗುಲ್ಬರ್ಗಾ ಜಿಲ್ಲೆಯ ತಾಂಡಗಳಲ್ಲಿ 17 ಹೆಣ್ಣು ಮಕ್ಕಳನ್ನು ಆಂಧ್ರ ಪ್ರದೇಶದ ತಾಂಡೂರಿನ ಜಾನ್ ಅಬ್ರಹಾಂ ಮೆಮೋರಿಯಲ್ ಬೆಥಾನಿ ಹೋಂಗೆ ಮಾರಾಟ ಮಾಡಿರುವುದಾಗಿ ತಿಳಿದು ಬಂದಿದೆ. ಈ ಪ್ರಕರಣದಲ್ಲಿ 11 ಜನ ಆರೋಪಿಗಳು ಭಾಗಿಯಾಗಿದ್ದು, ಅವರುಗಳನ್ನು ಬಂಧಿಸಲಾಗಿದೆ ಹಾಗೂ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಈ ಎರಡು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ.

ಇಂತಹ ದೂರುಗಳು ವರದಿಯಾದಲ್ಲಿ ಆರೋಪಿಗಳ ವಿರುದ್ಧ ಉಗ್ರಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಕ್ಕಳು ಬರೀ ಚಿಂಚೋಳಿಯಲ್ಲಿ ಮಾತ್ರವಲ್ಲ. ಆಂಧ್ರಪ್ರದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಮಕ್ಕಳು ಮಾರಾಟವಾಗಿವೆ. ಈ ಬಗ್ಗೆ ರಿಪೋರ್ಟ್ ಆಗಿವೆ. ಆದರೆ ಈ ಮಕ್ಕಳು ಎಲ್ಲಿ ಹೋಗಿವೆ ಎಂಬ ಬಗ್ಗೆ ಇಲ್ಲಿಯವರೆಗೂ ಗೊತ್ತಾಗಿಲ್ಲ. ಈ ಕೇಸ್ ದಾಖಲಾಗಿರುವಂಥಾದ್ದು ಸರಿ. ಆ ಮಕ್ಕಳು ಎಲ್ಲಿ ಹೋದವು? ಅದರ ಬಗ್ಗೆ ಸರ್ಕಾರದವರು ತಿಳಿಸಬೇಕಲ್ಲಾ? ಎಷ್ಟು ಮಕ್ಕಳು ಮಾರಾಟ ಆದವು, ಆ ಮಕ್ಕಳು ಎಲ್ಲಿಗೆ ಹೋದವು? ಎಂಬ ಬಗ್ಗೆ ಇವತ್ತಿನವರೆಗೂ ಗೊತ್ತಾಗುತ್ತಿಲ್ಲ. ಆ ಭಾಗವನ್ನು ಹಿಂದುಳಿದ ಪ್ರದೇಶವೆಂದು, ಅಲ್ಲಿ ಪ್ಯಾಕೇಜ್ ಅನ್ನು ಕೊಟ್ಟರು, ಸುಮಾರು 10 ಕೋಟಿ ರೂಪಾಯಿಗಳೆಂದು ಹಿಂದೆ ಕೊಟ್ಟಿದ್ದರು. ಆ ಹಣ ಎಷ್ಟು ಕೊಟ್ಟರು? ಅದು ಯಾವುದಕ್ಕೆ ಖರ್ಚು ಆಯಿತು? ಆ 10 ಕೋಟಿ ರೂಪಾಯಿಗಳನ್ನು ಕೊಟ್ಟರೊ, ಇಲ್ಲವೋ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಡಿಟೈಲ್ ಆಗಿ ತಿಳಿಸಬೇಕು.

ಮುಖ್ಯಮಂತ್ರಿ : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳ ವರದಿಯ ಬಗ್ಗೆ ಈಗಾಗಲೇ ಏನು ತನಿಖೆಯನ್ನು ನಡೆಸಿದ್ದಾರೆ, ಅದರ ಪ್ರಕಾರ ಈಗ ಘಟನೆಗಳು ನಡೆದಿಲ್ಲವೆಂದು ಸರ್ಕಾರಕ್ಕೆ ವರದಿ ಬಂದಿದೆ. 2001ನೇ ಇಸವಿಯಲ್ಲಿ ಆಗಿರುವಂತಹ ಪ್ರಕರಣ ಇದು. ಈ ಒಂದು ಪ್ರಕರಣದಲ್ಲಿ 11 ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ, ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ಮಕ್ಕಳು ಎಲ್ಲಿಗೆ ಹೋದವು, ಎಂಬ ಬಗ್ಗೆ ತಿಳಿಸಬೇಕೆಂದು ಕೇಳುತ್ತೇನೆ. ಮತ್ತೆ ಪ್ಯಾಕೇಜ್ ಕೊಟ್ಟಿರುವ ಬಗ್ಗೆ ತಿಳಿಸಬೇಕು. ಹಿಂದುಳಿದ ಪ್ರದೇಶ ಆಗಿದೆ. ಅದಕ್ಕೆ ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ 10 ಕೋಟಿ ರೂಪಾಯಿಗಳನ್ನು ರಿಲೀಫ್ ಫಂಡ್ ಎಂದು ಕೊಟ್ಟಿದ್ದರು. ಅದರ ಬಗ್ಗೆ ಇತ್ತೀಚಿನ ವರದಿ ಏನು ಇಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರೆ, ಇದಕ್ಕೆ ಉತ್ತರವನ್ನು ಹೇಳುತ್ತೀರಾ?

ಶ್ರೀ ಎಂ.ಕೆ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನು ಮೈಸೂರಿನಲ್ಲಿ ನೀರಿನ ಬಗ್ಗೆ ಕೇಳಿದ್ದೆ.

ಅಧ್ಯಕ್ಷರು : ತಾವು ಕೇಳಿದ್ದೀರಿ. ನಾನು ನಿಮ್ಮನ್ನು ಕರೆದಾಗ ಎಲ್ಲಿಗೆ ಹೊರಟು ಹೋಗಿದ್ದೀರಿ?

ಮುಖ್ಯಮಂತ್ರಿ : ಮಾನ್ಯ ಅಧ್ಯಕ್ಷರೆ, 2001ರಲ್ಲಿ ಆದಂತಹ ಪ್ರಕರಣದಲ್ಲಿ ಆ ಮಕ್ಕಳುಗಳನ್ನು ಅವರ ಕುಟುಂಬಗಳಿಗೆ ವಾಪಸ್ಸು ಕಳುಹಿಸುವಂತಹ ವ್ಯವಸ್ಥೆ ಆಗಿದೆ, ಇದರ ಬಗ್ಗೆ ಸಿಒಡಿ ತನಿಖೆಯನ್ನು ಮಾಡಿ, ಆ ಮಕ್ಕಳನ್ನು ಅವರ ಕುಟುಂಬಗಳಿಗೆ ವಾಪಸ್ಸು ಕಳುಹಿಸಿದ್ದಾರೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸುಳ್ಳು ವರದಿಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ವೈಜನಾಥ್ ಪಾಟೀಲ್‌ರವರೆ, ತಾವು ಎರಡು, ಮೂರು ಬಾರಿ ಉಪ ಪ್ರಶ್ನೆಗಳನ್ನು ಕೇಳಿದ್ದೀರಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಹೇಳಿದ್ದಾರೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸುಳ್ಳು ವರದಿಯನ್ನು ಕೊಡುತ್ತಿದ್ದಾರೆ. ಅವರು ವಾಪಸ್ಸು ಕೊಟ್ಟಿರುವ ರಿಪೋರ್ಟ್ ಎಲ್ಲಿ ಇದೆ? ಇಲ್ಲ. ದಯಮಾಡಿ ತಿಳಿಸಬೇಕು. ಯಾರಿಗೆ ವಾಪಸ್ಸು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ಮೈಸೂರು ನಗರದಲ್ಲಿನ ನೀರಿನ ಸಮಸ್ಯೆಯ ಬಗ್ಗೆ.

ಶ್ರೀ ಎಂ.ಕೆ. ಸೋಮಶೇಖರ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ನೀರಿನ ಸಮಸ್ಯೆ ಬಹಳ ಹೆಚ್ಚಾಗಿದೆ. ಕೆ.ಆರ್.ಎಸ್. ಪಕ್ಕದಲ್ಲಿದ್ದರೂ, ಅಲ್ಲಿ ಸಾಕಷ್ಟು ನೀರಿದ್ದರೂ ಕೂಡ ಮೈಸೂರಿನವರಿಗೆ ನೀರು ದೊರೆಯುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಈ ವಿಷಯವನ್ನು ನೀವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಆಗ ನಾನು ನಿಮ್ಮನ್ನು ಕರೆದಾಗ ನೀವು ಇರಲಿಲ್ಲ. ಈಗ ಕೇಳುತ್ತಿದ್ದೀರಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಹೇಳಿ.